ಮುಖ್ಯ. ಹಾಗೆಯೇ, ಕನ್ನಡ ಸಾಹಿತ್ಯಕ ಪಠ್ಯಗಳೊಳಗಿನ ಸಾಮಾಜಿಕ ವಾಸ್ತವವಾದ ಹಾಗೂ ಸಮಾಜವಾದಿ ವಾಸ್ತವವಾದವನ್ನು ಈ ದೃಷ್ಟಿಕೋನದಿಂದ ಶೋಧಿಸುವ ಕೆಲಸವಿನ್ನೂ ಆಗಬೇಕಿದೆ. ಕೃಷ್ಣಪ್ಪನವರು ಕುವೆಂಪು ಅವರ ಸಾಹಿತ್ಯವನ್ನು ಪ್ರಶ್ನಿಸಿದರೆ, ಅವರ ಪುರೋಹಿತಶಾಹಿಯನ್ನು ಹರವೆ ದೇವಯ್ಯನವರು ವಿಮರ್ಶೆಗೊಳಪಡಿಸಿದ್ದೂ ಇದೆ. ಅದೇ ಸಾಲಿಗೆ ಮೇಲೆ ನಾನು ಸಂಪ್ರದಾಯಭಂಗವೆಂದು ಹೆಸರಿಸಿದ 'ಸಂಸ್ಕಾರ' ಕಾದಂಬರಿಯಲ್ಲಿನ ಚಂದ್ರಿ ಪಾತ್ರವೂ ಸೇರಿಕೊಳ್ಳುತ್ತದೆ. ಅದರರ್ಥ, ದಲಿತ ವಿಮರ್ಶಕರು ಯಾವ ಮುಲಾಜಿಗೂ ಒಳಗಾಗದೆ, ಎಲ್ಲರನ್ನೂ, ಎಲ್ಲವನ್ನೂ ವಿಮರ್ಶೆಗೊಳಪಡಿಸಿದ್ದಾರೆಂಬುದು. ಅದು ವಿಮರ್ಶೆಯ ಪ್ರಮುಖ ಲಕ್ಷಣ. ಅದರ ತಪ್ಪುಒಪ್ಪುಗಳ ಮಾತು ಬೇರೆ. ಆದರೆ, ದಲಿತರ ವಿಮರ್ಶೆಯನ್ನೂ, ವೈಚಾರಿಕತೆಯನ್ನು, ಚಿಂತನೆಯನ್ನು ದಲಿತ ವಿಮರ್ಶೆ, ವೈಚಾರಿಕತೆ, ಚಿಂತನೆ ಎಂದು ವಿಂಗಡಿಸಿ ನೋಡಲಾಗುತ್ತದೆಯೇ ಹೊರತು, ಕನ್ನಡ ವಿಮರ್ಶೆ, ವೈಚಾರಿಕತೆ, ಚಿಂತನೆಗೆ ಹೊಸ ಒಳನೋಟಗಳನ್ನು ನೀಡುತ್ತದೆಯೆಂಬುದಾಗಿ ಯಾಕೆ ನೋಡಲಾಗುವುದಿಲ್ಲ? ಮಾಸ್ತಿ ವೆಂಕಟೇಶ ಅಯ್ಯಂಗಾರರು ಕುವೆಂಪು ಅವರ 'ಶೂದ್ರತಪಸ್ವಿ'ಗೆ ಬರೆದ ವಿಮರ್ಶೆಯನ್ನು ಯಾಕೆ ಬ್ರಾಹ್ಮಣ ವಿಮರ್ಶೆ, ವೈಚಾರಿಕತೆ, ಚಿಂತನೆ ಎಂಬುದಾಗಿ ನೋಡಲಾಗುವುದಿಲ್ಲ ಅನ್ನುವುದನ್ನು ಗಮನಿಸಿದಾಗ, ಬಸವಲಿಂಗಪ್ಪನವರ ಮಾತಿನಲ್ಲಿರುವ ಕಠೋರ ಸತ್ಯ ಕಾಣುತ್ತದೆ. ಅಲ್ಲದೆ, ಮಾಸ್ತಿ ವೆಂಕಟೇಶ ಅಯ್ಯಂಗಾರರಂತಹವರೇ ಕುವೆಂಪು ಅವರಂತಹ ಶೂದ್ರರ ಮೇಲೆ ಜಾತೀಯತೆಯ ಆರೋಪವನ್ನು ಹೊರಿಸುವುದು, ಬಸವಲಿಂಗಪ್ಪನವರ ಬೂಸಾ ಹೇಳಿಕೆಗೆ ಪೇಜಾವರರಾದಿಯಾಗಿ ದೊಡ್ಡ ಬ್ರಾಹ್ಮಣ ಅಥವಾ ಸವರ್ಣ ಸಮುದಾಯಗಳೇ ತಿರುಗಿ ಬಿದ್ದದ್ದು ನೋಡಿದರೆ, 'ಕನ್ನಡ ಸಂಸ್ಕೃತಿ'ಯ ಅಧಿಕಾರ ರಾಜಕಾರಣದ ಪರಿಚಯವಾಗುತ್ತದೆ. ಹಾಗೆಯೇ, ಸಮಾನತೆ, ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯಿರುವ ಯಾವುದೇ ಸಮುದಾಯವವರಿಗೂ ಬಸವಲಿಂಗಪ್ಪನವರು ಹೇಳಿದ್ದು ಸರಿಯಾಗಿತ್ತೆಂದೇ ಅನಿಸುತ್ತದೆ. ಆಗ ಅದು 'ದಲಿತ ವಿಮರ್ಶೆ' ಎಂಬ ಹಣೆಪಟ್ಟಿಯನ್ನು ಅಳಿಸಿ, ಸೆಕ್ಯುಲರ್ ರೂಪ ಪಡೆದು, ಚಾರಿತ್ರಿಕ ಕನ್ನಡ ವಿಮರ್ಶೆಯಾಗಿ ಸಾರ್ವಕಾಲಿಕವಾಗಿ ನಿಲ್ಲುತ್ತದೆ.

**ಹೊಸ ಶತಮಾನದಲ್ಲಿ ಹಳೆ ಶತಮಾನದ ಸಾಹಿತ್ಯ ವಿಮರ್ಶೆ**

ಇಪ್ಪತ್ತೊಂದನೇ ಶತಮಾನದ ಆರಂಭದಲ್ಲಿ 'ಶತಮಾನದ ಸಾಹಿತ್ಯ ವಿಮರ್ಶೆ' (2001) ಎಂಬ ಒಂದು ಸಾವಿರ ಪುಟಗಳ ಬೃಹತ್ ಸಂಪಾದಿತ ಗ್ರಂಥದ ಪ್ರಸ್ತಾವನೆಯಲ್ಲಿ ಹಿರಿಯ ವಿಮರ್ಶಕರಾದ ಎಚ್.ಎಸ್. ರಾಘವೇಂದ್ರರಾವ್ ಹೀಗೆ ಬರೆಯುತ್ತಾರೆ: "ಕನ್ನಡ ವಿಮರ್ಶೆಯು ಮೊದಲಿನಿಂದಲೂ ಸಮಾಜಮುಖಿಯೇ ವಿನಾ, ಜೀವನಮುಖಿಯೇ ವಿನಾ ಕಲಾಮುಖಿಯಲ್ಲ. ಆದ್ದರಿಂದಲೇ ಸಾಹಿತ್ಯತತ್ವ, ವಿಮರ್ಶಾಪಂಥಗಳು, ಶೈಲಿ-ಪ್ರತಿಮೆ-ಪ್ರತೀಕಗಳಂಥ ಪರಿಕರಗಳು, ಛಂದಸ್ಸು, ಶಿಲ್ಪಗಳಂಥ ಆಕೃತಿ ನಿರ್ದಿಷ್ಟಗಳು, ನಮ್ಮ ವಿಮರ್ಶಕ-ಓದುಗರನ್ನು ತಮ್ಮ ಪ್ರತ್ಯೇಕತೆಯಲ್ಲಿ ಆಕರ್ಷಿಸಿರುವುದು ಬಹಳ ಕಡಿಮೆಯೇ. ಹಾಗೆಯೇ ವಿವಿಧ ಜ್ಞಾನಶಾಖೆಗಳ ನೆಲೆಯಲ್ಲಿ ಸಾಹಿತ್ಯವನ್ನು ಸತತವಾಗಿ ಪರಿಶೀಲಿಸುವ ಬರಹಗಾರರು ಆಯಾ ಶಿಸ್ತುಗಳಿಂದಲೂ ಮೂಡಿಬಂದಿಲ್ಲ. ಸಾಹಿತ್ಯದ ವಿದ್ಯಾರ್ಥಿಗಳೂ ಅಂಥ ಎಕ್ಸ್‌ಕ್ಲೂಸಿವ್ ಅಸ್ತಿತ್ವವನ್ನ ಅಪೇಕ್ಷಿಸಿಲ್ಲ. ಹೀಗಾಗಿ ಕನ್ನಡದ ಸಂದರ್ಭದಲ್ಲಿ ಮನಶ್ಶಾಸ್ತ್ರೀಯ ವಿಮರ್ಶಕ, ಆರ್ಕಿಟೈಪಲ್ ವಿಮರ್ಶಕ, ಸಮಾಜಶಾಸ್ತ್ರೀಯ ವಿಮರ್ಶಕ ಮುಂತಾದ ವಿಶೇಷಣಗಳಿಗೆ ಹೆಚ್ಚಿನ ಅರ್ಥವಿಲ್ಲ. ಬದಲಾಗಿ ಆಶಯಗಳ ನೆಲೆಯಿಂದಲೇ ಹೊರಡುವ, ಸಮಾಜವಾದೀ ವಿಮರ್ಶಕ, ಸ್ತ್ರೀವಾದಿ ವಿಮರ್ಶಕಿ, ಮುಂತಾದ ವಿವರಣೆಗಳು ಹೆಚ್ಚು ಉಪಯುಕ್ತವಾಗಬಹುದು" (xxix). ಆದರೆ, ರಾವ್ ಅವರಂತಹ ಸಹೃದಯಿ ಹಿರಿಯ ಕನ್ನಡ ವಿಮರ್ಶಕರು ಅಂತಹ ಬೃಹತ್ ಸಂಪುಟಕ್ಕೆ ಪ್ರಸ್ತಾವನೆ ಬರೆಯುವಾಗ, ಆ ಸಂಕಲನದ ಸ್ವರೂಪ ಹಾಗೂ ರೂಪಿಸಿರುವ ಬಗೆ ಬಗ್ಗೆ ಮಾತ್ರ ಬರೆದು ಕೈತೊಳೆದುಕೊಳ್ಳುತ್ತಾರೆಯೇ ಹೊರತು, ಪ್ರಸ್ತಾವನೆಯ ನೆಪದಲ್ಲಿ ಶತಮಾನದ ಸಾಹಿತ್ಯ ವಿಮರ್ಶೆ ಬಗ್ಗೆ ವಿದ್ವತ್ಪೂರ್ಣ ಪ್ರಸ್ತಾವನೆ ಬರೆಯುವ ಅವಕಾಶ ಕೈಚೆಲ್ಲಿಬಿಟ್ಟಿದ್ದಾರೆನಿಸುತ್ತದೆ. ಸಾಲದ್ದಕ್ಕೆ, "ಜಾತೀಯತೆವಿರೋಧಿ, ಬಂಡವಾಳಶಾಹಿವಿರೋಧಿ, ಊಳಿಗಮಾನ್ಯವಿರೋಧಿ" ಎಂದು ತಮ್ಮ